4. ಹೆಚ್‌ಆರ್‌ಬಿಆರ್ ಲೇಔಟ್ 2ನೇ ಬ್ಲಾಕ್, 6ನೇ ಮುಖ್ಯರಸ್ತೆ ಉದ್ಯಾನವನ.
5. ಓಎಮ್‌ಬಿಆರ್ ಲೇಔಟ್ ರಿಂಗ್‌ರಸ್ತೆ ಪಕ್ಕ ಉದ್ಯಾನವನ.
6. ಕಮ್ಮನಹಳ್ಳಿ ಡಾ॥ ರಾಜ್‌ಕುಮಾರ್ ಉದ್ಯಾನವನ.
7. ಕುವೆಂಪು ಉದ್ಯಾನವನ.

ವಾಹನ ಸಂಚಾರ ರಸ್ತೆ ತೊಂದರೆ

59

ಶ್ರೀ.ಕರಡಿ ಸಂಗಣ್ಣ ಅಮರಪ್ಪ

ಸಿ.ಎಂ. ಉದುಸಿ ಮಾನ್ಯ ಲೋಕೋಪ–ಯೋಗಿ ಸಚಿವರು

ಅ) ರಾಷ್ಟ್ರೀಯ ಹೆದ್ದಾರಿಗಳಾದ 13 ಮತ್ತು 63ರ ಮರಿಯಮ್ಮನ ಹಳ್ಳಿಯ ರೈಲ್ವೇ ಗೇಟಿನಿಂದ ಶಿಮ್ಲಾ ಕ್ರಾಸ್‌ವರೆಗೆ ವಾಹನಗಳ ಸಂಚಾರಕ್ಕೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಹೌದು.

ಆ) ಹಾಗಿದ್ದಲ್ಲಿ, ಸರ್ಕಾರ ತೆಗೆದುಕೊಂಡ ಕ್ರಮಗಳೇನು;

ರಾಷ್ಟ್ರೀಯ ಹೆದ್ದಾರಿ–13ರ ರಸ್ತೆಯನ್ನು ಆಯ್ದ ಭಾಗಗಳಲ್ಲಿ ನಾಲ್ಕು ಪಥಗಳಾಗಿಸುವ ಯೋಜನೆಯು ಕೇಂದ್ರ ಭೂಸಾರಿಗೆ ಮಂತ್ರಾಲಯದಿಂದ NHDP-III ಯೋಜನೆಯಲ್ಲಿ ಸೇರಿರುತ್ತದೆ. ತಾಂತ್ರಿಕ ಸಮಾಲೋಚಕರು ಯೋಜನಾ ವರದಿ ತಯಾರಿಸಿ, ಭೂಸಾರಿಗೆ ಹಾಗು ಹೆದ್ದಾರಿ ಮಂತ್ರಾಲಯಕ್ಕೆ ಮಂಡಿಸಿರುತ್ತಾರೆ. ಅಹ್ ಬಿಡ್‌ದಾರರನ್ನು ನಿಯೋಜಿಸಲು NHAI ಪ್ರಕಟಣೆ ಹೊರಡಿಸಿರುತ್ತದೆ. ವಾಹನ ದಟ್ಟಣೆಯನ್ನು ಗಮನಿಸಿ ಮರಿಯಮ್ಮನಹಳ್ಳಿಯ ಗೇಟ್‌ನಿಂದ ಶಿಮ್ಲಾ ಗೇಟ್‌ವರೆಗೆ ಆರು ಪಥಗಳ ರಸ್ತೆಯನ್ನಾಗಿ ಪರಿವರ್ತಿಸುವ ಬಗ್ಗೆ ವರದಿ ಮಾರ್ಪಡಿಸಿ ಸಲ್ಲಿಸುವಂತೆ ತಾಂತ್ರಿಕ ಸಮಾಲೋಚಕರಿಗೆ NHAI ಪ್ರಾಧಿಕಾರದವರು ನಿರ್ದೇಶಿಸಿರುತ್ತಾರೆ.

ಇ) ಈ ರಾಷ್ಟ್ರೀಯ ಹೆದ್ದಾರಿಗಳಲ್ಲಿ ಬರುವ ತುಂಗಭದ್ರಾ ಮೇಲ್ಸೇತುವೆಯಲ್ಲಿ ಭಾರಿ ವಾಹನಗಳ ಸಂಚಾರದಿಂದ ಮೇಲ್ಸೇತುವೆಗೆ ಮತ್ತು ರಸ್ತೆ ಸಂಚಾರಕ್ಕೆ ಹಾಗೂ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಹೌದು.

ಈ) ಹಾಗಿದ್ದಲ್ಲಿ, ಸರ್ಕಾರವು ತೆಗೆದುಕೊಂಡ ಕ್ರಮಗಳೇನು;

ತುಂಗಾಭದ್ರಾ ನದಿಗೆ ಅಡ್ಡಲಾಗಿ ನಾಲ್ಕು ಪಥದ ಹೊಸ ಸೇತುವೆಗಳನ್ನು ನಿರ್ಮಿಸಲು ಹಾಗೂ ಹಾಲಿ ಇರುವ ಸೇತುವೆಗಳನ್ನು ಪುನರುಜ್ಜೀವನಗೊಳಿಸುವ ಕಾಮಗಾರಿ NHDP-III ಯೋಜನೆಯಲ್ಲಿ ಸೇರಿದ್ದು, ರೂ.95.43 ಲಕ್ಷಗಳಿಗೆ ಕೇಂದ್ರ ಭೂಸಾರಿಗೆ ಮಂತ್ರಾಲಯದ ಅನುಮೋದನೆಗೆ ಸಲ್ಲಿಸಲಾಗಿದೆ. ಹಾಗೂ ಭೂಸಾರಿಗೆ

ಮಂತ್ರಾಲಯದಿಂದ ಈ ಭಾಗದಲ್ಲಿನ ಸದರಿ ರಸ್ತೆಯನ್ನು ಆರು ಪಥದ ರಸ್ತೆಯನ್ನಾಗಿ ಪರಿವರ್ತಿಸುವ ಕಾರ್ಯವು ಅನುಮೋದನೆಯ ಅಂತಿಮ ಹಂತದಲ್ಲಿರುತ್ತದೆ.

ಉ) ಈ ರಸ್ತೆಯಲ್ಲಿ ಸಂಚರಿಸುವ ಅದಿರಿನ ವಾಹನಗಳಿಗೆ ಹಾಗೂ ಭಾರೀ ವಾಹನಗಳ ಸಂಚಾರಕ್ಕೆ ಪರ್ಯಾಯ ರಸ್ತೆ ವ್ಯವಸ್ಥೆಯನ್ನು ಕಲ್ಪಿಸಲಾಗುವುದೇ;

ಈಗಾಗಲೇ ಸದರಿ ರಸ್ತೆಯನ್ನು ಆರು ಪಥಗಳ ರಸ್ತೆಯನ್ನಾಗಿ ಪರಿವರ್ತಿಸುವ ಕಾರ್ಯವು ಅನುಮೋದನೆಯ ಅಂತಿಮ ಹಂತದಲ್ಲಿರುವುದರಿಂದ ಪ್ರತ್ಯೇಕ ರಸ್ತೆ ಅಗತ್ಯವಿರುವುದಿಲ್ಲ.

ಊ) ಹಾಗಿದ್ದಲ್ಲಿ, ಎಂದಿನಿಂದ ಪರ್ಯಾಯ ವ್ಯವಸ್ಥೆಯನ್ನು ತರಲಾಗುವುದು?

ಉದ್ಭವಿಸುವುದಿಲ್ಲ.

ಸಂಚಾರಿ ಪೊಲೀಸ್ ಠಾಣೆ

60 ಶ್ರೀ ಕರಡಿ ಸಂಗಣ್ಣ ಅಮರಪ್ಪ (ಕೊಪ್ಪಳ)

ಡಾ॥ ವಿ.ಎಸ್.ಆಚಾರ್ಯ ಮಾನ್ಯ ಗೃಹ ಸಚಿವರು

ಅ) ಕೊಪ್ಪಳ ನಗರದಲ್ಲಿ ಸಂಚಾರಿ ಪೊಲೀಸ್ ಠಾಣೆ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಹೌದು.

ಆ) ಹಾಗಿದ್ದಲ್ಲಿ, ಸಂಚಾರಿ ಪೊಲೀಸ್ ಠಾಣೆಯನ್ನು ಪ್ರಾರಂಭಿಸಲು ಸರ್ಕಾರ ಕ್ರಮ ಕೈಗೊಂಡಿದೆಯೇ?

ಇ) ಸಂಚಾರಿ ಆರಕ್ಷಕ ಠಾಣೆಯನ್ನು ನಿರ್ಮಿಸಲು ಸ್ಥಳ ಗುರುತಿಸಲಾಗಿದೆಯೇ?

ಈ) ಹಾಗಿದ್ದಲ್ಲಿ, ಈ ಸ್ಥಳದಲ್ಲಿ ಕಟ್ಟಡ ಕಾಮಗಾರಿ ಪ್ರಾರಂಭಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?

ಉ) ಕಾಮಗಾರಿಯನ್ನು ಎಂದಿನಿಂದ ಪ್ರಾರಂಭಿಸಲಾಗುವುದು? ಈ ಕಾಮಗಾರಿಗೆ ಬಿಡುಗಡೆ ಮಾಡಲಾಗುವ ಅನುದಾನದ ಮೊತ್ತವೆಷ್ಟು?

ಊ) ಕೊಪ್ಪಳ ನಗರವು ಜಿಲ್ಲಾ ಕೇಂದ್ರ ಸ್ಥಾನವಾಗಿರುವುದರಿಂದ ನಗರವು ವಾಹನ ದಟ್ಟಣೆಯಿಂದ ಕೂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಋ) ಹಾಗಿದ್ದಲ್ಲಿ, ಇದುವರೆವಿಗೂ ಸಂಚಾರಿ ಪೊಲೀಸ್ ಠಾಣೆಯನ್ನು ಪ್ರಾರಂಭಿಸದಿರಲು ಕಾರಣಗಳೇನು?

ಸರ್ಕಾರದ ಪತ್ರ ಸಂಖ್ಯೆ: ಹೆಚ್‌ಡಿ/130/ ಪಿಒಪಿ/08, ದಿನಾಂಕ:23–7–2008 ರಲ್ಲಿ ಕೊಪ್ಪಳ ನಗರ ಸಂಚಾರಿ ಪೊಲೀಸ್ ಠಾಣೆ ತೆರೆಯುವ ಬಗ್ಗೆ ಪೂರ್ಣ ವಿವರಗಳನ್ನೊಳಗೊಂಡ ಪ್ರಸ್ತಾವನೆ ಕಳುಹಿಸಲು ನಿರ್ದೇಶಿಸಿತ್ತು, ಅದರಂತೆ ಈ ಪ್ರಸ್ತಾವನೆಯನ್ನು ಪರಿಶೀಲಿಸಲಾಯಿತು.